# ಜನರಿಂದ ನಾನು ಮೇಲೆ ಬಂದೆ...

ಕೋಗಿಲೆ ಕಂಠದ ಖಾಸಿಂ ಅಲಿ 'ಕಲರ್ಸ್ ಕನ್ನಡ' ವಾಹಿನಿಯ 'ಕನ್ನಡ ಕೋಗಿಲೆ–2'ರ ಚಾಂಪಿಯನ್. ಹಾಡಿನಿಂದ ಎಲ್ಲರನ್ನು ಮಂತ್ರಮುಗ್ಧಗೊಳಿಸುವ ಖಾಸಿಂ ಕಂಠಸಿರಿಯ ಹಿಂದೆ ಏರಿಳಿತದ ಬದುಕಿದೆ. ಸಂಕಷ್ಟದಲ್ಲೂ ಸವಾಲುಗಳನ್ನು ಮೆಟ್ಟಿ ನಿಂತ ಹಾವೇರಿಯ ಹಾನಗಲ್ ತಾಲ್ಲೂಕಿನ ಸಾನ್ವಸ್ಸಿ ಊರಿನ ಹಾಡುಹಕ್ಕಿ, ತನ್ನ ಬದುಕಿನ ಸರಿಗಮಪದ ಬಗ್ಗೆ 'ಸುಧಾ' ಜೊತೆ ಮಾತನಾಡಿದೆ.

■ ಸಂದರ್ಶನ: **ಶಶಿಕುಮಾರ್ ಸಿ.**

◆ **'ಹಾವೇರಿ ಟು ಬೆಂಗಳೂರು' ಜರ್ನಿ ಹೇಗಿದೆ?**

ವಾಸ್ತವವಾಗಿ ನನ್ನೀ ಜರ್ನಿ ಶುರುವಾಗಿದ್ದು ಹಾವೇರಿಯಿಂದ ಬೆಂಗಳೂರಿಗಲ್ಲ. ನಾನು ಹಾವೇರಿಯಲ್ಲೇ ಇದ್ದಿದ್ರೆ ನಾಡಿನ ಜನರಿಗೆ ನನ್ನ ಪರಿಚಯವಿರುತ್ತಿರಲಿಲ್ಲ. ಕಷ್ಟದ ಸಮಯದಲ್ಲಿ ಕೈಗೂಡಿದ ಸಂಗೀತವು ನನ್ನನ್ನು 'ಕನ್ನಡ ಕೋಗಿಲೆ 2'ರ ಆಡಿಷನ್‌ಗೆ ಬೆಳಗಾವಿಗೆ ಕರೆದೊಯ್ತು. ಅಲ್ಲಿಂದ ಉದ್ಯಾನನಗರಿಗೆ ಪ್ರಯಾಣ. ಹೀಗಾಗಿಯೇ ನನ್ನ ಜರ್ನಿ ಹಾವೇರಿ ಟು ಬೆಳಗಾವಿ. ಬೆಳಗಾವಿ ಟು ಬೆಂಗಳೂರು.

ಬೆಂಗಳೂರಿಗೆ ಬರುವ ಮುನ್ನ ಈ ಖಾಸಿಂ ಬರೀ ಶೂನ್ಯ. ಒಂದೊಳ್ಳೆ ಸ್ಥಾನಕ್ಕೆ ಹೋಗಿ ನನ್ನ ತಂದೆ–ತಾಯಿ ಪಟ್ಟ ಕಷ್ಟದ ಬಗ್ಗೆ ಮನಬಿಚ್ಚಿ ಮಾತನಾಡಬೇಕು, ಅವರು ಪಟ್ಟ ಕಷ್ಟಕ್ಕೆ ಪ್ರತಿಫಲ ಸಿಕ್ಕಿದೆ ಅನ್ನೋ ತೃಪ್ತಿಯನ್ನು ಅವರಿಗೆ ನೀಡಬೇಕೆಂಬ ಕನಸು ಕಂಡಿದ್ದೆ. ಅದಕ್ಕೆ ವೇದಿಕೆಯಾಗಿದ್ದು ಈ ಕಾರ್ಯಕ್ರಮ. ನನ್ನ ಹಾಡುಗಾರಿಕೆಗೆ ಜನ ತಲೆದೂಗಿದರು. ಪ್ರೀತಿಯಿಂದ ನನ್ನನ್ನು ಸ್ವೀಕರಿಸಿ ಪ್ರೋತ್ಸಾಹಿಸಿದರು. ಜಾತಿ, ಧರ್ಮ ಯಾವುದೇ ಆಗಿದ್ದರೂ ಈ ನಾಡಿನಲ್ಲಿ ಎಲ್ಲರಿಗೂ ಸಮಾನರು ಅನ್ನೋದನ್ನು ಕನ್ನಡಿಗರು ಸಾಬೀತು ಮಾಡಿದರು. ಅವರ ಪ್ರೀತಿ ಸಂಪಾದನೆಯ ಬಳಿಕ ಉಳಿದ ಆಸೆಗಳ ಬಗ್ಗೆ ನಾನು ಅಷ್ಟೇನೂ ತಲೆಕೆಡಿಸಿಕೊಂಡಿರಲಿಲ್ಲ. ಆದರೆ, ಕಾರ್ಯಕ್ರಮದಲ್ಲಿ ಹಾಡುತ್ತಾ ಸಾಗಿದಂತೆ ಜನರು ದಿನೇ ದಿನೇ ನನ್ನನ್ನು ಹೆಚ್ಚಾಗಿ ಸ್ವೀಕರಿಸತೊಡಗಿದರು. ಎಲ್ಲೋ ಇದ್ದವನಿಗೆ ತಮ್ಮ ಹೃದಯದಲ್ಲಿ ಜಾಗ ಕೊಟ್ಟವರ ನಿರೀಕ್ಷೆಯನ್ನು ಹುಸಿಗೊಳಿಸಬಾರದೆಂದು ಇನ್ನಷ್ಟು ಚೆನ್ನಾಗಿ ಹಾಡಿದೆ. ಸ್ಪರ್ಧೆಯಲ್ಲಿ ಗೆಲ್ಲಲೇಬೇಕೆಂದು ನಾನು ಹಾಡಿದವನಲ್ಲ. ಈ ಬಾರಿ ಉತ್ತಮವಾಗಿ ಹಾಡಿದ್ದೇನೆ ಮುಂದಿನ ಬಾರಿ ಇನ್ನೂ ಅತ್ಯುತ್ತಮವಾಗಿ ಹಾಡಬೇಕೆಂದು ಹಾಡಿದೆ. ಜನರೇ ನನ್ನನ್ನು ಗೆಲ್ಲುವಂತೆ ಮಾಡಿದರು.

ಎಲ್ಲ ಯಶಸ್ಸಿಗೆ ಮೂಲ ಕಾರಣ 'ಸಾಯಿ ನಿರ್ಮಲ ಪ್ರೊಡಕ್ಷನ್'ನ ನಿರ್ಮಲಮ್ಮ. ನನ್ನ ಪಾಲಿಗೆ ಅವರು ಎರಡನೇ ತಾಯಿ. ಬೆಳಗಾವಿಯಲ್ಲಿ ನಡೆದ ಆಡಿಷನ್‌ನಲ್ಲಿ ನನ್ನನ್ನು ಗುರುತಿಸಿ 'ನನ್ನಲ್ಲೊಂದು ಕಲೆ ಇದೆ, ಅದಕ್ಕೆ ವೇದಿಕೆ ಬೇಕಿದೆ' ಎಂಬುದನ್ನು ಅರಿತು ಬೆಂಗಳೂರಿಗೆ ಕರೆದುಕೊಂಡು ಬಂದರು. ಕಾರ್ಯಕ್ರಮದ ನಿರ್ದೇಶಕ ಪ್ರಶಾಂತ್ ಸರ್ ಹಾಗೂ ತೀರ್ಪುಗಾರರ ಮಾರ್ಗದರ್ಶನದಲ್ಲಿ ಇಲ್ಲಿಯವರೆಗಿನ ನನ್ನ ಜರ್ನಿ ಚೆನ್ನಾಗಿಯೇ ಇದೆ.

◆ **ಗೆಲ್ತೀರಿ ಅನಿಸಿತ್ತಾ?**

ನನಗೆ ಹಾಗೆ ಅನಿಸಿರಲಿಲ್ಲ. ಜನರೇ ಅದನ್ನು ನಿರ್ಧರಿಸಿದ್ದರು. ಟ್ರೋಫಿ ಪಡೆಯಲು ನನ್ನಷ್ಟೇ ಅರ್ಹತೆಯನ್ನು 'ಟಾಪ್ 20' ಪಟ್ಟಿಯಲ್ಲಿದ್ದವರು ಹೊಂದಿದ್ದರು. ನಾನು ಮೊದಲು ಅಂತ ಕಿರೀಟ ಹಾಕಿದ್ದಾರೆ. ಅದು ಎಲ್ಲರಿಗೂ ಸೇರಿದ್ದು.

◆ **'ಬ್ರೆತ್‌ಲೆಸ್ ಸಾಂಗ್' ಹಾಡಲು ಕಟ್ಟುನಿಟ್ಟಿನ ಅಭ್ಯಾಸ ಬೇಕು. ಕಾರ್ಯಕ್ರಮದಲ್ಲಿ ಹಲವು ಬಾರಿ ಬ್ರೆತ್‌ಲೆಸ್ ಸಾಂಗ್ ಹಾಡುಗಳನ್ನು ಆಯ್ಕೆ ಮಾಡಿಕೊಂಡಿದ್ದೀರಿ. ಆ ಎನರ್ಜಿ ಹೇಗೆ ಬಂತು?**

ಪೊಲೀಸ್ ಆಗಬೇಕು ಎಂಬ ಕನಸನ್ನು 2010ರಲ್ಲಿ ಕಟ್ಟಿಕೊಂಡಿದ್ದೆ. ಅದಕ್ಕೆ ಪೂರಕವಾಗಿ ಯೋಗ–ವ್ಯಾಯಾಮ ಮಾಡುತ್ತಿದ್ದೆ. ಅದು ಬ್ರೆತ್ ಕಂಟ್ರೋಲ್‌ಗೆ ಸಹಕಾರಿಯಾಯಿತು. ಸಾಮಾನ್ಯವಾಗಿ 38ರಿಂದ 40 ಸೆಕೆಂಡ್ ಅಥವಾ ಕನಿಷ್ಠ 1 ನಿಮಿಷದವರೆಗೆ ಇತರರು ಬ್ರೆತ್ ಕಂಟ್ರೋಲ್ ಮಾಡುವ ಶಕ್ತಿ ಹೊಂದಿರುತ್ತಾರೆ. ನನಗೆ 1.25 ನಿಮಿಷದವರೆಗೆ ಉಸಿರಾಟ ನಿಯಂತ್ರಣದ ಸಾಮರ್ಥ್ಯ ಇದೆ.

◆ **ಸಂಗೀತದ ಸೆಳೆತ ನಿಮ್ಮನ್ನು ಆವರಿಸಿದ್ದಾದರೂ ಹೇಗೆ?**

ಶಾಲೆಯಲ್ಲಿ ಓದುವಾಗ ನಾನು ಆಲ್‌ರೌಂಡರ್.

